ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–3/2017–18 ದಿನಾಂಕ: 24.03.2018**

## 73 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ

* * * * *

73 ವಲಯ ಅರಣ್ಯಾಧಿಕಾರಿ ಹುದ್ದೆಗಳ ನೇರ ನೇಮಕಾತಿ ಕುರಿತಂತೆ ದಿನಾಂಕ: 16.11.2019 ರ ಈ ಕಛೇರಿಯ ಪ್ರಕಟಣೆಯಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಬಿ.ಎಸ್ಸಿ. (ಅರಣ್ಯಶಾಸ್ತ್ರ) ವರ್ಗದಡಿ ಪರಿಶಿಷ್ಟ ಜಾತಿ – ಮಹಿಳೆ ಮೀಸಲಾತಿಯಡಿ ಆಯ್ಕೆಯಾಗಿದ್ದ ಕುಮಾರಿ ವೈಶಾಖಿ ಪಿ. ಚಂದ್, ನೋಂದಣಿ ಸಂಖ್ಯೆ: 972358 ಇವರ ಆಯ್ಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ. ಸದರಿಯವರು ಮೂಲತಃ ಕೇರಳ ರಾಜ್ಯದ ನಿವಾಸಿಯಾಗಿದ್ದು, ಪರಿಶಿಷ್ಟ ಜಾತಿ ಮೀಸಲಾತಿಯಡಿ ಆಯ್ಕೆ ಹೊಂದಲು ಅರ್ಹತೆ ಹೊಂದಿರುವರೆ ಎಂಬ ಕುರಿತು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಸ್ಪಷ್ಟೀಕರಣ ಪಡೆಯಲಾಗಿರುತ್ತದೆ. ಅದರಂತೆ, ಸಮಾಜ ಕಲ್ಯಾಣ ಇಲಾಖೆಯು **ಕುಮಾರಿ ವೈಶಾಖಿ ಪಿ. ಚಂದ್ ಇವರು ಕೇರಳ ರಾಜ್ಯಕ್ಕೆ ಸಂಬಂಧಪಟ್ಟವಾಗಿರುವುದರಿಂದ ಮೀಸಲಾತಿ ಆಧಾರದ ಮೇಲೆ ಕರ್ನಾಟಕ ರಾಜ್ಯ ಹುದ್ದೆಗಳಿಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ** ಎಂದು ಸ್ಪಷ್ಟೀಕರಣ ನೀಡಿರುತ್ತದೆ. ಆದ್ದರಿಂದ ಸದರಿಯವರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

ಶ್ರೀ ಶಿವಾನಂದ ಪಿ.ಸಿ., ನೋಂದಣಿ ಸಂಖ್ಯೆ: 932694 ಇವರು ಬಿ.ಎಸ್ಸಿ. (ವಿಜ್ಞಾನ ಮತ್ತು ಇಂಜಿನಿಯರಿಂಗ್) ವರ್ಗದಡಿ 2ಎ – ಮಾಜಿ ಸೈನಿಕ ಮೀಸಲಾತಿಯಡಿ ಆಯ್ಕೆಯಾಗಿರುತ್ತಾರೆ. ಸದರಿಯವರು ನಿಗಧಿಪಡಿಸಿದ ದಿನಾಂಕದಂದು ಹಾಜರಾಗಿ ವಲಯ ಅರಣ್ಯಾಧಿಕಾರಿ ಹುದ್ದೆಯ ಕರ್ತವ್ಯಕ್ಕೆ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ. ಆದ್ದರಿಂದ, ಸದರಿಯವರು ವಲಯ ಅರಣ್ಯಾಧಿಕಾರಿ ಹುದ್ದೆಯಲ್ಲಿ ಆಸಕ್ತಿ ಹೊಂದಿಲ್ಲವೆಂದು ಪರಿಗಣಿಸಿ, ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

ಮುಂದುವರೆದು, ದಿನಾಂಕ: 20.01.2020 ರಂದು ಈ ಕಛೇರಿಯಿಂದ ವಲಯ ಅರಣ್ಯಾಧಿಕಾರಿ ಹುದ್ದೆಗೆ ಅಂತಿಮ ಕಾಯುವಿಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಪ್ರಸ್ತುತ ಭರ್ತಿ ಮಾಡಲು ಲಭ್ಯವಿರುವ ಮೇಲ್ಕಾಣಿಸಿದ ಮೀಸಲಾತಿ ಹುದ್ದೆಗಳಿಗೆ ಅಂತಿಮ ಕಾಯುವಿಕೆ ಪಟ್ಟಿಯಿಂದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಅನುಸಾರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, 2ನೇ ಅಂತಿಮ ಆಯ್ಕೆ ಪಟ್ಟಿಯನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾಗಿದೆ.

ಈ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್ www.aranya.gov.in ನಲ್ಲಿ ಪ್ರಕಟಿಸಲಾಗಿದೆ.

ಬೆಂಗಳೂರು
ದಿನಾಂಕ: 28 –01–2020

ಪ್ರಧಾನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

## Annexure - 1

## Range Forest Officer

ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-3/2017-18 ದಿನಾಂಕ: 24-03-2018

## B.Sc. (Science and Engineering) - 2nd Final Selection List

| Sl. No. | Register Number | Name of the Candidate | Date of Birth | Gender | Category | KM | Rural | Ex-Serviceman | Prelims and Mains Exam Total Marks | Final Selected Category |
|---|---|---|---|---|---|---|---|---|---|---|
| 1 | 931167 | GIRISH LAXMAN NAIK | 16-08-1989 | Male | 2A | Yes | Yes | No | 199.76 | 2A - EX-SERVICEMAN (LIEN) |

**ವಲಯ ಅರಣ್ಯಾಧಿಕಾರಿ ಹುದ್ದೆಗೆ ಈ ಮೇಲ್ಕಾಣಿಸಿದ ಅಭ್ಯರ್ಥಿಯ ಈ ಆಯ್ಕೆಯು ಈ ಕೆಳಗಿನ ಸತ್ಯಾಪನೆಗೆ (Verification) ಒಳಪಟ್ಟಿರುತ್ತದೆ.**

1) ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಪದವಿ ಪ್ರಮಾಣ / ಅಂಕ ಪಟ್ಟಿಯ ಸತ್ಯಾಪನೆ.

2) ಸಂಬಂಧಪಟ್ಟ ಜಿಲ್ಲೆಯ ಜಾತಿ – ಪರಿಶೀಲನಾ ಸಮಿತಿಯಿಂದ ಜಾತಿ ಪ್ರಮಾಣ ಪತ್ರದ ಸತ್ಯಾಪನೆ.

3) ಸಂಬಂಧಪಟ್ಟ ಜಿಲ್ಲಾ ಪೋಲೀಸ್ ಅಧೀಕ್ಷಕರಿಂದ ಸಮಾಜಘಾತಕ ಕೃತ್ಯಗಳಲ್ಲಿ ತೊಡಗಿಲ್ಲದೇ ಇರುವ ಬಗ್ಗೆ / ಅಪರಾಧಿಕರಣ ತನಿಖೆಗೆ ಒಳಪಡದೇ ಇರುವ ಬಗ್ಗೆ ಸತ್ಯಾಪನೆ.

ದಿನಾಂಕ: 28.01.2020

ಸ್ಥಳ: ಬೆಂಗಳೂರು

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

(ಅರಣ್ಯ ಪಡೆ ಮುಖ್ಯಸ್ಥರು)

## Annexure - 2

## Range Forest Officer

ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–3/2017–18 ದಿನಾಂಕ: 24–03–2018

## B.Sc. (Forestry) - 2nd Final Selection List

| Sl. No. | Register Number | Name of the Candidate | Date of Birth | Gender | Category | KM | Rural | Ex-Serviceman | Prelims and Mains Exam Total Marks | Final Selected Category |
|---|---|---|---|---|---|---|---|---|---|---|
| 1 | 941277 | RAJESHWARI B B | 07-08-1993 | Female | SC | No | No | No | 147.82 | SC - WOMEN |

**ವಲಯ ಅರಣ್ಯಾಧಿಕಾರಿ ಹುದ್ದೆಗೆ ಈ ಮೇಲ್ಕಾಣಿಸಿದ ಅಭ್ಯರ್ಥಿಯ ಈ ಆಯ್ಕೆಯು ಈ ಕೆಳಗಿನ ಸತ್ಯಾಪನೆಗೆ (Verification) ಒಳಪಟ್ಟಿರುತ್ತದೆ.**

1) ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಪದವಿ ಪ್ರಮಾಣ / ಅಂಕ ಪಟ್ಟಿಯ ಸತ್ಯಾಪನೆ.

2) ಸಂಬಂಧಪಟ್ಟ ಜಿಲ್ಲೆಯ ಜಾತಿ – ಪರಿಶೀಲನಾ ಸಮಿತಿಯಿಂದ ಜಾತಿ ಪ್ರಮಾಣ ಪತ್ರದ ಸತ್ಯಾಪನೆ.

3) ಸಂಬಂಧಪಟ್ಟ ಜಿಲ್ಲಾ ಪೋಲೀಸ್ ಅಧೀಕ್ಷಕರಿಂದ ಸಮಾಜಘಾತಕ ಕೃತ್ಯಗಳಲ್ಲಿ ತೊಡಗಿಲ್ಲದೇ ಇರುವ ಬಗ್ಗೆ / ಅಪರಾಧಿಕರಣ ತನಿಖೆಗೆ ಒಳಪಡದೇ ಇರುವ ಬಗ್ಗೆ ಸತ್ಯಾಪನೆ.

ದಿನಾಂಕ: 28 .01.2020

ಸ್ಥಳ: ಬೆಂಗಳೂರು

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

(ಅರಣ್ಯ ಪಡೆ ಮುಖ್ಯಸ್ಥರು)